ರಮೇಶ್, ಹನುಮನಾಳು
*ಸಿನಿಮಾ ಪೋಸ್ಟರ್ ಕಂಡು ಸಿನಿಮಾಗೆ ಹೋಗುತ್ತೇವೆ; ಟಿವಿ ಧಾರವಾಹಿಯ ಪೋಸ್ಟರ್ ನೋಡಿ ಎಲ್ಲಿಗೆ ಹೋಗುವುದು?*




ಎಷ್ಟುಹೊತ್ತಿಗೆ ಬರುತ್ತದೆಂದು ತಿಳಿದು ಆ ವೇಳೆಯಲ್ಲಿ ಮನೆಯಿಂದ ಹೊರಗಿರಿ. ನೆಮ್ಮದಿ ದೊರಕೀತು.

ಪಿ.ಜೆ. ರಾಘವೇಂದ್ರ, ಮೈಸೂರು
*ರಾಜಕಾರಣಿಗಳಿಗೆ ಚೌರ್ಯ ಪ್ರಶಸ್ತಿ ನೀಡಿದರೆ ಹೇಗಿರುತ್ತೆ?*
ಚೌರ್ಯ ಬೇಡ, ಚೌರ ಪ್ರಶಸ್ತಿ ನೀಡಿ. ದೇಶದ ಚೌರ ಮಾಡುವುದರಲ್ಲಿ ಅವರೇ ಶ್ರೇಷ್ಠರು!

ಎಂ.ಎನ್. ಸೋಮಶೇಖರ್, ಮೈಸೂರು
*ರಾಮಾಯಣದ ಆಂಜನೇಯನಿಗೂ, ಮಹಾಭಾರತದ ಜಾಂಬವಂತನಿಗೂ ಏನು ವ್ಯತ್ಯಾಸ?*
ಆಂಜನೇಯ 'ಮಣಿ'ಯ ಕೊರಿಯರ್ ಏಜೆಂಟ್; ಜಾಂಬವಂತ 'ಮಣಿ'ಯ ಗಾರ್ಡಿಯನ್!

ಓಂಚನ್ನೇಶ್, ಭದ್ರಾವತಿ
*ಹುಡುಗಿಯರು ಸ್ಕಿನ್ ಟೈಟ್ ಪ್ಯಾಂಟನ್ನೇ ಯಾಕೆ ಹಾಕ್ಕೋತಾರೆ?*



ಲೂಸ್ ಪ್ಯಾಂಟ್‌ಗೆ ಹೆಚ್ಚು ಬಟ್ಟೆ ಬೇಕಾಗುತ್ತದಲ್ಲ: ಅವರದು ಉಳಿತಾಯದ ಬುದ್ಧಿ!

ರಾಜೇಂದ್ರ ಇಂಗಳಗಿ. ರಾಮದುರ್ಗ
*ಕೆಲವೊಂದು ಪ್ರಶ್ನೆಗಳಿಗೆ ಎಂದೂ ಉತ್ತರ ಸಿಗುವುದಿಲ್ಲವಾ?*
ಪೂರ್ವೋತ್ತರಗಳು ಇಲ್ಲದಿದ್ದರೆ ಸಿಗಲಾರದು!

ಬಿ.ಎಸ್.ನಾರಾಯಣಸ್ವಾಮಿ, ಬೋಧನಹೊಸಹಳ್ಳಿ
*'ಬಿಎಂಟಿಸಿ ನಿಮ್ಮ ಮನೆ ಬಾಗಿಲಿಗೆ' ಎಂಬ ನಾಮಫಲಕದೊಂದಿಗೆ ಬಿಎಂಟಿಸಿ ಚಲಿಸಿದರೆ ಹೇಗಿರುತ್ತೆ?*
ಕೈತೋಟ, ಕಾಂಪೌಂಡ್ ಖಲಂ!

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ
*ಪ್ರೀತಿ ದೊಡ್ಡದೋ, ಪ್ರೀತಿಸುವ ಮನುಷ್ಯ ದೊಡ್ಡವನೋ?*
ಪ್ರೀತಿಯೇ; ಮನುಷ್ಯ ಅದನ್ನು ಒಂದು ಪೀಳಿಗೆಯಿಂದ ಮತ್ತೊಂದಕ್ಕೆ ಸಾಗಿಸುವ ವಾಹನವಷ್ಟೆ!

ಡಿ. ದೊಡ್ಡಲಿಂಗೇಗೌಡ, ಕೊಳ್ಳೇಗಾಲ
*ಕಚೇರಿಗಳಲ್ಲಿ ಕೊಡುವ ಲಂಚಕ್ಕೂ, ದೇವರಿಗೆ ಸಲ್ಲಿಸುವ ಕಾಣಿಕೆಗೂ ಏನು ವ್ಯತ್ಯಾಸ?*
ಒಂದು ಪಾಪ; ಮತ್ತೊಂದು ಪ್ರಾಯಶ್ಚಿತ್ತ!

ಮಹಾವೀರ ಕಾಸರ, ಶಿವಮೊಗ್ಗ
*ಗಂಡಸರು ಹೆಂಗಸರ ಸಮಸ್ಯೆಗಳ ಬಗ್ಗೆ ಮಾತನಾಡುತ್ತಾರೆ. ಹೆಂಗಸರು ಗಂಡಸರ ಸಮಸ್ಯೆಗಳ ಬಗ್ಗೆ ಏಕೆ ಮಾತನಾಡುವುದಿಲ್ಲ?*
ಸಮಸ್ಯೆಗಳೇ ಸಮಸ್ಯೆಗಳ ಬಗ್ಗೆ ಮಾತನಾಡುವುದು ಚಂದವಲ್ಲವಲ್ಲ!

ಶ್ವೇತಾಲಕ್ಷ್ಮಿ ಅಮ್ಮೆ, ಬೆಂಗಳೂರು
*ಕೋಳಿಯಿಂದ ಮೊಟ್ಟೆಯೋ, ಮೊಟ್ಟೆಯಿಂದ ಕೋಳಿಯೋ?*
ಎರಡೂ ಅಲ್ಲ; ಕೋಳಿಯಿಂದ ಕಬಾಬ್, ಮೊಟ್ಟೆಯಿಂದ ಆಮ್ಲೆಟ್!

ರೆಮಿತ್ ಸಿಕ್ವೇರಾ, ಹೊಸನಗರ
*ಬಿಟ್ಟ ಸ್ಥಳ ತುಂಬಿ; ಪ್ರೀತಿ, ಪ್ರೇಮ, ಪ್ರಣಯ, ಮದುವೆ, ಮಕ್ಕಳು, ...., ....*
ಸಾಧ್ಯವಿಲ್ಲ. ಮಕ್ಕಳು ಬಿಟ್ಟ ಸ್ಥಾನಗಳು ತೊಟ್ಟಿಲು ಮತ್ತು ಬೇಬಿ ಸಿಟ್ಟಿಂಗ್. ಒಂದು ನನಗೆ ಚಿಕ್ಕದು, ಮತ್ತೊಂದಕ್ಕೆ ನನ್ನನ್ನು ಸೇರಿಸಲ್ಲ!

ಎಸ್.ಎ. ಮೋಹನರಾಜು, ಶಿವಮೊಗ್ಗ
*ಸ್ನೇಹವನ್ನು ಪ್ರೀತಿಗೆ ತಿರುಗಿಸಲೋ ಅಥವಾ ಪ್ರೀತಿಯನ್ನು ಸ್ನೇಹಕ್ಕೆ ತಿರುಗಿಸಲೋ?*
ಅವುಗಳನ್ನು ತಿರುಗಿಸುವ ಬದಲು ಅವು ಇರುವವರೊಡನೆ ತಿರುಗಾಡಿ!

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
*ಮನುಷ್ಯನು ಬೇಕಾದಷ್ಟು ದುಃಖ ತಡೆದುಕೊಳ್ಳಬಲ್ಲ. ಆದರೆ ಸುಖವನ್ನು ತಡೆದುಕೊಳ್ಳಲಾರ. ಏಕೆ?*
ಸುಖಕ್ಕೆ ಬೆಲೆ ತೆರಬೇಕಲ್ಲ!

## ಬಹುಮಾನಿತ ಪ್ರಶ್ನೆ

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು
*ಪ್ರೀತಿ/ಕಾಮಕ್ಕೆ ಅಡ್ಡಿಯಾಗದ ಜಾತಿ ಮದುವೆಗೆ ಮಾತ್ರ ಅಡ್ಡಿಯಾಗುತ್ತದೆಯಲ್ಲಾ?*
ಸರಿಯೇ; ನಮ್ಮಲ್ಲಿ ನೀತಿಗಿಂತ ಜಾತಿಯೇ ಶ್ರೇಷ್ಠ!

ಬಿ. ಚಂದ್ರೇಗೌಡ, ಬೆಂಗಳೂರು
*ಲೈನು ಹೊಡೆಯೋದು ಎಂದರೇನು?*
ಕಣ್ಣು ಕಣ್ಣು ಲಿಂಕ್ ಮಾಡಿ, ಥಂಕ್ ಮಾಡಿ, ಸಿಂಕ್ ಮಾಡ್ಕೊಳೋದು!

ಎಸ್. ಕೃಷ್ಣಮೂರ್ತಿ, ಬೆಂಗಳೂರು
*ಸುಂದರಿಯೂ, ನೀಲವೇಣಿಯೂ ಆದ ಹುಡುಗಿಯನ್ನೇ ಮದುವೆಯಾಗಬೇಕೆಂದಿದ್ದೇನೆ. ಹುಡುಕಿಕೊಡುವಿರಾ?*
ಅದಕ್ಕೇಕೆ ಚಿಂತೆ? ಬ್ಯೂಟಿ ಪಾರ್ಲರ್‌ನಲ್ಲಿ ಕೇಳಿ, ಮೇಡ್ ಟು ಆರ್ಡರ್ ವಧು ಸಿಗಬಹುದು!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ತಲೆಹರಟೆ ಬೇಡ. ಚುನಾವಣೆ ಎಂದರೆ ನಿಜವಾದ ಅರ್ಥ ಏನು ರಾಂ?*




ಚುನಾವಣೆಗೆ 'ಅರ್ಥ'ವೇ ಮುಖ್ಯ!

ಬಿ.ವಿ. ನಾರಾಯಣ್, ಬೆಳಗೊಳ
*ಎಲ್ಲರೂ ಸೋತಾಗ ಆತ್ಮಾವಲೋಕನ ಮಾಡಿಕೊಳ್ಳುತ್ತಾರೆ; ಗೆದ್ದಾಗ ಏಕೆ ಮಾಡಿಕೊಳ್ಳುವುದಿಲ್ಲ?*
ಗೆಲುವಿನ ಮದದಿಂದ ಒಳಗಿನ ಕಣ್ಣು ಕುರುಡಾಗಿರುತ್ತದಲ್ಲ!

ಪಿ.ಎನ್. ಶ್ರೀವತ್ಸ, ಬೆಂಗಳೂರು
*ಸನ್ಯಾಸತ್ವ ಸ್ವೀಕರಿಸದಿದ್ದರೂ ಇತ್ತೀಚೆಗೆ ಕೆಲವರು ಮನೆ ಬಿಟ್ಟು ಹೊರನಡೆದುಬಿಡುತ್ತಾರಲ್ಲಾ...?*
ಇದು ಲಿವಿಂಗ್ ಟುಗೆದರ್‌ನ ವಿರುದ್ಧದ ಅಭ್ಯಾಸ, ಲಿವಿಂಗ್ ಸೆಪರೇಟ್; ಒಗ್ಗಿದರೆ ಹೊರಕ್ಕೆ, ಒಗ್ಗದಿದ್ದರೆ ಒಳಕ್ಕೆ!

■ ರಾಮ್